# ಹರಿಹರನ ರಗಳೆಯಲ್ಲಿ ಕೊಂಡಗುಳಿ ಕೇಶಿರಾಜ ಮತ್ತು ಪ್ರಭುತ್ವ

**ಸೋಮಶೇಖರ ಎಂ.***

**DOI: https://doi.org/10.5281/zenodo.22302114**

**ABSTRACT**

ವಚನಕಾರರ ನಂತರದಲ್ಲಿ ಬಂದ ಹರಿಹರ ತನ್ನ ರಗಳೆಗಳಲ್ಲಿ ಚಿತ್ರಿಸಿರುವ ಹಲವು ಪಾತ್ರಗಳು ರಾಜತ್ವವನ್ನು ಪ್ರತಿಭಟಿಸಿರುವುದು ಸ್ಪಷ್ಟವಾಗಿ ಕಾಣುತ್ತವೆ. ಮೂಲತಃ ಕವಿ ಹರಿಹರ ರಾಜ ವ್ಯವಸ್ಥೆಯಲ್ಲಿದ್ದವನು. ಪ್ರಭುತ್ವ ಜನಸಾಮಾನ್ಯರೊಂದಿಗೆ ನಡೆದುಕೊಂಡ ಸತ್ಯಾಸತ್ಯತೆಗಳನ್ನು ಅವಲೋಕಿಸಿ ಅನುಭವಿಸಿದವನು. ರಾಜ ಸೇವೆಗಿಂತಲೂ ಹಂಪೆಯ ವಿರೂಪಾಕ್ಷನ ಸೇವೆಯೇ ಶ್ರೇಷ್ಠವೆಂದು ರಾಜನ ಆಸ್ಥಾನವನ್ನು ತೊರೆದು ಬಂದವನು. ಈತನ ರಗಳೆಗಳಲ್ಲಿ ಬರುವ ಪಾತ್ರಗಳು ಕೂಡ ರಾಜತ್ವವನ್ನು ವಿರೋಧಿಸಿದವರೇ. ತೆಲುಗು ಬೊಮ್ಮಯ್ಯ, ಬಾಹೂರ ಬೊಮ್ಮಯ್ಯ, ಶಂಕರದಾಸಿಮಯ್ಯ, ಅಕ್ಕಮಹಾದೇವಿ ಹೀಗೆ ಹಲವು ರಗಳೆಗಳಲ್ಲಿ ಪ್ರಭುತ್ವವನ್ನು ಧಿಕ್ಕರಿಸಿ ಹೋರಾಡಿದವರನ್ನೇ ವಸ್ತು ವಿಷಯವನ್ನಾಗಿ ಆಯ್ಕೆಮಾಡಿಕೊಂಡಿರುವುದು ಇದಕ್ಕೆ ಸಾಕ್ಷಿ. ಅವುಗಳಲ್ಲಿ ಕೊಂಡಗುಳಿ ಕೇಶಿರಾಜನ ರಗಳೆಯೂ ಒಂದು.

ಕೊಂಡಗುಳಿ ಕೇಶಿರಾಜ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿದ್ವಾಂಸನಾಗಿ, ದಂಡನಾಯಕನಾಗಿ ಪ್ರಾಮಾಣಿಕವಾಗಿ ಕಾಯಕ ನಿರ್ವಹಿಸಿದ ಶರಣ. ಶಿವಯೋಗಧ್ಯಾನದಲ್ಲಿ ನಿರತನಾಗಿ ಜಗವೆಲ್ಲವನ್ನು ಮರೆತು ದಕ್ಷತೆಯಿಂದ, ನಿಷ್ಠೆಯಿಂದ ಕಾಯಕ ಮಾಡುವುದಲ್ಲದೇ, ನೇರವಾಗಿ ಮಾತನಾಡುವ ಮಹಾಯೋಗಿ. ಅಸಮಾನತೆಯ ವಿರುದ್ಧ, ಪ್ರಭುತ್ವದ ದುರಾಡಳಿತದ ವಿರುದ್ಧ ಯಾವುದೇ ಮುಲಾಜಿಲ್ಲದೇ ಧ್ವನಿಯೆತ್ತುವ ವೀರಶರಣ. ಇಂಥ ಶರಣನ ಬದುಕಿನ ಚರಿತ್ರೆಯನ್ನು ಹರಿಹರ ತಮ್ಮ ರಗಳೆಗಳ ಮೂಲಕ ಸಾರ್ವಜನಿಕವಾಗಿಸಿದ. ಎಲ್ಲರೂ ಕೊಂಡಗುಳಿ ಕೇಶಿರಾಜನ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಸಾಧ್ಯವಾಗಿಸಿದ. ಹಾಗಾಗಿ ಈ ಲೇಖನದಲ್ಲಿ ಕೇಶಿರಾಜನ ವೀರ ಜೀವನದ ಕುರಿತು ತಿಳಿದುಕೊಳ್ಳುವ

* **ಡಾ. ಸೋಮಶೇಖರ ಎಂ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕ, ಬಳ್ಳಾರಿ ಜಿಲ್ಲೆ.

ಸಂಗತಿಗಳನ್ನು ಚರ್ಚಿಸಲಾಗಿದೆ. ನಿಷ್ಠಾವಂತ ಶರಣನ ಕಾಯಕ ಮತ್ತು ದಾಸೋಹದ ಮಹತ್ವವನ್ನು ತಿಳಿಯುವ ಉದ್ದೇಶ ಹೊಂದಲಾಗಿದೆ. ಅನ್ಯಾಯಕ್ಕೆ ಒಳಗಾದವರು ಹೇಗೆ ಧೈರ್ಯದಿಂದ ಪ್ರಭುತ್ವವನ್ನು ಎದುರಿಸಬೇಕು ಎನ್ನುವ ಮನೋಬಲದ ಮೌಲ್ಯವನ್ನು ತಿಳಿಯುವುದು ಇಲ್ಲಿನ ಸಂಗತಿಯಾಗಿದೆ.

**KEYWORDS:** ಹರಿಹರ, ರಗಳೆಗಳು, ಕೊಂಡಗುಳಿ ಕೇಶಿರಾಜ, ಬಸವಣ್ಣ, ದಂಡನಾಯಕ, ರಾಜವರ್ಗ, ಪುರೋಹಿತ ವರ್ಗ.

**ಪ್ರಸ್ತಾವನೆ:**

ಹನ್ನೆರಡನೆಯ ಶತಮಾನವು ಜನಸಾಮಾನ್ಯರಿಗೆ ಪ್ರತಿಭಟನೆಯ ಅಥವಾ ಹೋರಾಟದ ವೇದಿಕೆಯಾಗಿ ಪರಿಣಮಿಸಿತು. ಸಮಾನತೆಗಾಗಿ ಬದುಕುವ ಹಕ್ಕನ್ನು ಪಡೆದುಕೊಳ್ಳಲಿಕ್ಕಾಗಿ ಅಂದಿನ ಜನಸಮುದಾಯ ಒಬ್ಬ ಹೋರಾಟಗಾರನ ಮುಂದಾಳುತ್ವದಲ್ಲಿ ಮುನ್ನುಗ್ಗಿದುದು ಸಾಮಾನ್ಯ ಮಾತಲ್ಲ. ದೊರೆಮಾನ್ಯ ವ್ಯವಸ್ಥೆಗೆ ಪ್ರತಿರೋಧ ವ್ಯಕ್ತಪಡಿಸುವುದು ಅಷ್ಟೊಂದು ಸುಲಭವಲ್ಲ. ಹನ್ನೆರಡನೆಯ ಶತಮಾನಕ್ಕಿಂತಲೂ ಪೂರ್ವದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳು ಈ ರೀತಿಯ ಪ್ರತಿರೋಧಕ್ಕೆ ಕಾರಣವಾಯಿತು. ಮುಂಚೆ ರಾಜತ್ವವನ್ನು ಪ್ರಶ್ನಿಸಲಿಲ್ಲವೆ? ಎಂಬ ಮಾತು ಕೇಳಿಬರುವುದು ಸಹಜ. ಒಬ್ಬ ಸಾಮಾನ್ಯ ವ್ಯಕ್ತಿ ರಾಜನ ಆಸ್ಥಾನದಲ್ಲಿ ಉನ್ನತ ಪದವಿಯನ್ನು ಹೊಂದಿದ್ದರೆ ಹೇಗೆ ತಾನೇ ರಾಜತ್ವವನ್ನು ವಿರೋಧಿಸಲು ಆದೀತು?. ಪ್ರಾಚೀನ ಕಾಲದ ಕವಿಗಳು ರಾಜತ್ವವನ್ನು ಪಡೆದುಕೊಂಡು ಜೋಳವಾಳಿಗಾಗಿ ದುಡಿದು ವೇಳೆವಾಳಿಗಾದರೊ ತನ್ನ ಧರ್ಮ, ಭಾಷೆ, ಸಂಸ್ಕೃತಿಗಾಗಿ ದುಡಿದದ್ದು ಗಮನಿಸಬಹುದು. ಆಂತರ್ಯದಲ್ಲಿ ರಾಜತ್ವವನ್ನು ಧಿಕ್ಕರಿಸಿರುವುದು ಕಾವ್ಯಗಳಲ್ಲಿ, ಪುರಾಣ ಕೃತಿಗಳಲ್ಲಿ ದಾಖಲಾಗಿವೆ. ಆದರೆ ನೇರವಾಗಿ ಜನವಿರೋಧಿಯಾದ ಪ್ರಭುತ್ವ ವ್ಯವಸ್ಥೆಯನ್ನು ಧಿಕ್ಕರಿಸಲಿಲ್ಲ. ಮುಂದೆ ಬಂದ ಬಸವಣ್ಣ ಮತ್ತಿತರ ಶಿವಶರಣರು ಯಾವುದೇ ವೈಯುಕ್ತಿಕ ಫಲಾಪೇಕ್ಷೆಯನ್ನು ಬಯಸದೇ ನೇರವಾಗಿ ಜನವಿರೋಧಿ ಪ್ರಭುತ್ವ ವ್ಯವಸ್ಥೆಯನ್ನು ಯಾರ ಮುಲಾಜಿಲ್ಲದೆ ಧಿಕ್ಕರಿಸಿರುವುದು ಇಡೀ ರಾಜವ್ಯವಸ್ಥೆಗೆ ತಲ್ಲಣವುಂಟಾಗುವಂತೆ ಮಾಡಿದ್ದು ನಿಜ.

ಬಸವಣ್ಣ ರಾಜ ಬಿಜ್ಜಳನ ಆಸ್ಥಾನದ ಭಂಡಾರಕ್ಕೆ ಅರ್ಥಮಂತ್ರಿಯಾಗಿ ನೇಮಕವಾಗಿದ್ದರೂ ರಾಜನ ಭಂಡಾರಕ್ಕಾಗಲೀ, ಜನರಿಗಾಗಲೀ ಯಾವುದೇ ಚ್ಯುತಿಬರದಂತೆ ದುಡಿದದ್ದು ಸ್ಮರಣೀಯ. ಆದರೆ ರಾಜ ವ್ಯವಸ್ಥೆಯ ಒಳಗಿನ ಪಟ್ಟಭದ್ರಹಿತಾಸಕ್ತಿಯನ್ನು ಹೊಂದಿದ್ದ ಸಮುದಾಯವು ಇದನ್ನು ಸಹಿಸದೇ ಪಿತೂರಿ ನಡೆಸಿ ಬಸವಣ್ಣನ ಮೇಲೆ ಆಪಾದನೆ ಬರುವಂತೆ ಮಾಡುತ್ತದೆ. ಇದರಿಂದ ಅಸಮಾಧಾನಗೊಂಡ ಬಸವಣ್ಣ ಆಡುವ ಮಾತುಗಳು ವಚನಗಳಲ್ಲಿ ದಾಖಲಾಗಿವೆ. ಕ್ರಾಂತಿಯ ಹರಿಕಾರನಾಗಿ ಜನಸಾಮಾನ್ಯರ ಪರವಾಗಿ ಹೋರಾಟ ಮಾಡಿ ಧಾರ್ಮಿಕ ಹಾಗೂ ಸಾಮಾಜಿಕ ಸಮಾನತೆಯನ್ನು ಕೊಡಿಸುವಲ್ಲಿ ಶ್ರಮಿಸಿದರು. ರಾಜತ್ವವನ್ನು

ದಿಕ್ಕರಿಸಿ, ಅನುಭವಮಂಟಪವನ್ನು ಸ್ಥಾಪಿಸಿ ಆ ಮೂಲಕ ಶೋಷಣೆಗೆ ಒಳಗಾದವರನ್ನು ಒಂದೆಡೆ ಸೇರಿಸಿ ಸಮಾಜೋಧಾರ್ಮಿಕ ಕಾರ್ಯಕ್ಕೆ ಮುಂದಾದರು. ಸ್ತ್ರೀಯರಿಗೆ ಸರಿಸಮಾನವಾದ ಸ್ಥಾನಮಾನವನ್ನು ನೀಡಿದ್ದು ಶಿವಶರಣರು. ಇಲ್ಲಿ ಬಸವಣ್ಣನವರ ಮುಂದಾಳತ್ವ ಜನವಿರೋಧಿ ಪ್ರಭುತ್ವವನ್ನು ಸಂಪೂರ್ಣವಾಗಿ ತಿರಸ್ಕರಿಸಿತು. ಯಾವುದೇ ಜಾತಿ ಭೇದವಿಲ್ಲದೆ ಸಮಾನವಾಗಿ ಬಾಳಿಬದುಕಲು ಅವಕಾಶಗಳು ಸಿಕ್ಕವು. ಕಾಯಕದ ಮಹತ್ವವನ್ನು ಸಾರಿ ಹೇಳಿದ್ದಲ್ಲದೇ ಕಾಯಕತತ್ವ ಮಾನವನಿಗೆ ಮುಕ್ತಿಯ ಮಾರ್ಗ ತೋರಿಸಬಲ್ಲದು ಎಂಬ ಕಟುಸತ್ಯವನ್ನು ಪ್ರತಿಪಾದಿಸಿದರು. ಜಾತಿಗೂ ವೃತ್ತಿಗೂ ನಡುವೆ ಏರ್ಪಟ್ಟಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಕಂದಕವನ್ನು ಹೋಗಲಾಡಿಸಿ, ವೃತ್ತಿಯಿಂದ ಜಾತಿ–ಜಾತಿಯಿಂದ ವೃತ್ತಿಯಲ್ಲ ಎಂದು ಸಾರಿಹೇಳಿದರು. ಈ ಪರಂಪರೆ ಮುಂದಿನ ಶರಣ ಸಂಕುಲಕ್ಕೆ ಮಾದರಿಯಾಯಿತು.

**ಕೊಂಡಗುಳಿ ಕೇಶಿರಾಜ ಮತ್ತು ಪ್ರಭುತ್ವ:**

ಕೊಂಡಗುಳಿ ಕೇಶಿರಾಜ ಬಸವ ಪೂರ್ವಯುಗದ ಶರಣನೂ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಮಹಾದಂಡನಾಯಕನೂ ಆಗಿದ್ದ ಈತನು ಪ್ರಬಲ ರಾಜಕಾರಣಿ, ಕವಿ ಮತ್ತು ಅನುಭಾವಿ. ಇತಿಹಾಸವು ಪುನರಾವರ್ತಿಸುತ್ತದೆ ಎನ್ನುವುದಾದರೆ ಪ್ರಭುಗಳ ವಿರುದ್ಧ ಹೋರಾಟಕ್ಕೆ ನಿಂತವನು ಕೊಂಡಗುಳಿ ಕೇಶಿರಾಜ. ಆದುದರಿಂದ ಈ ವರ್ಗ ಹೋರಾಟ ಪ್ರಾರಂಭವಾಗುವುದೇ ಈತನಿಂದ. ಕೊಂಡಗುಳಿಯಲ್ಲಿ ಕೇಶಿರಾಜನು ವಿದ್ವಾಂಸನಾಗಿದ್ದ. ಸೋಮನಾಥನಿಗೆ ಪ್ರತಿನಿತ್ಯ ಎಂಟು ಪದ್ಯಗಳನ್ನು ರಚಿಸಿ ಹೇಳುತ್ತಿದ್ದ. ಕಲ್ಯಾಣಪುರದಲ್ಲಿ ಚಾಲುಕ್ಯ ಚಕ್ರವರ್ತಿ ಪೆರ್ಮಾರ್ಡಿರಾಯ ರಾಜ್ಯಭಾರ ಮಾಡುತ್ತಿದ್ದನು. ಇವನಿಗೆ ಆತ್ಮೀಯರಾದವರು ಯಾರು ಇರಲಿಲ್ಲ. ಆದುದರಿಂದ ರಾಜನಿಗೆ ಬುದ್ಧಿವಂತ, ಕಲಾಕೋವಿದ, ನೀತಿವಂತರು ರಾಜ್ಯದಲ್ಲಿದ್ದರೆ ಹೇಳಿ ಎಂದು ರಾಜಸಭೆಯಲ್ಲಿ ಕೇಳಿದರು. ಅಲ್ಲಿರುವ ಹಿರಿಯರು ಕೇಶಿರಾಜನ ಹೆಸರು ಹೇಳಿದರು. ಆಗ ರಾಜ ಅವರನ್ನು ಕರೆಯಿಸಿ 'ಮಂತ್ರಿ'(ದಣ್ಣಾಯಕ) ಸ್ಥಾನವನ್ನು ನೀಡಿದರು. ಕೇಶಿರಾಜನು ರಾಜನ ಆಸ್ಥಾನದಲ್ಲಿ ರಾಜನು ನೀಡಿದ ಸಂಪತ್ತಿನಿಂದಾಗಿ ತನ್ನ ಇಷ್ಟದೇವರ ನೆನಪಿಗೋಸ್ಕರ ಶಿವಗೋಷ್ಠಿಗಳನ್ನು ನಡೆಸುತ್ತಾ ಹೋಗುತ್ತಾನೆ.

**"... ಶರಣರೊಡತಣಗೋಷ್ಠಿ ನೆರೆ ಕಿಡಲು**
**ಉರವಣಿಪ ಸಂಗಸುಖಲತೆಯ ಕುಡಿ ನಡಗಿಡಲು**
**ತಲೆಗೊಡಹಿ ಸಿಡಿಮಿಡಿಗೊಳ್ಳುತ್ತೆ ಸುರ್ರನೆ ಸುಯ್ದು**
**ನೆಲೆಗೊಂಡ ಸುಖವಳಿಯೆ ಬೈದು ನೆಲವಂ ಹೊಯ್ದು**
**ಮುಗ್ಧಂ ಶರಣವಿಯೋಗದಿನೊಳಗೆ ಬೇವುತಂ**
**ದಗ್ಧಾಂತರಂಗವೊಡನೊಡನುರಿಯೆ ನೋವುತಂ**
**ಸಂಗಸುಖವಳಿದು ಹರಣಂಗಳೆವ ತೆರನಾಗೆ**
**ಅಂಗಯಿಸಿ ನುಡಿದನಾ ಶರಣಸಭೆ ಬೆರಗಾಗೆ"**

(ಹರಿಹರನ ರಗಳೆಗಳು, ಪುಟ:240)

ಕೇಶಿರಾಜನ ಮನೋಭಾವನೆ ರಾಜತ್ವದ ವೈಭವದೊಂದಿಗೆ ಯಾವ ರೀತಿಯಲ್ಲೂ ಒಪ್ಪಂದ ಮಾಡಿಕೊಳ್ಳದಂತೆ ನಿಷ್ಠೆಗೆ ತಿರುಗಿತು. ಕೇಶಿರಾಜ ಯಾವುದೇ ಭೌತಿಕ ಆಡಂಬರಗಳಿಗೆ ಮನಸೋಲದೆ ತನ್ನ ನಿಷ್ಠೆಯನ್ನು ಶಿವೋಪಾಸನೆಯಲ್ಲೇ ಕಳೆದನು. ಆದರೆ ಒಂದು ದಿನ ರಾಜ ತನ್ನ ಆಳುಗಳನ್ನು ಕರೆದು, ಕೇಶಿರಾಜನನ್ನು ಕರೆದುಕೊಂಡು ಬನ್ನಿರಿ ಎಂದು ಹೇಳುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಕೇಶಿರಾಜ ಶಿವಗೋಷ್ಠಿ ನಡೆಯುತ್ತಿದ್ದುದರಿಂದ; ಕೇಶಿರಾಜರು ಸಿಡಿಮಿಡಿಗೊಂಡು ಸೇವಕರೊಡನೆ ಬರುತ್ತಿರುವಾಗ, ರಾಜಸಭೆಯಲ್ಲಿ ರಾಜನ ಮುಂದೆ ಇರುವ ಗಣ್ಯರು ಇದೇ ಸಮಯವೆಂದು ನಿಂದಿಸತೊಡಗಿದರು. ಅದು ನಿಮ್ಮ ದಣ್ಣಾಯಕರು ಅಂತಂಥವರಲ್ಲ ಅವರು ಶಿವಭಕ್ತರಾಗಿರುವುದರಿಂದ ಸದಾಕಾಲ ವಿಷ್ಣುನಿಂದಕರಾಗಿದ್ದಾರೆಂದು ಚುಚ್ಚಿದ ನಂತರ ನಿಮಗೆ ನಮಿಸುವದಿಲ್ಲ. ತನ್ನಲ್ಲಿರುವ ಉಂಗುರಕ್ಕೆ ಮಾತ್ರ ನಮಿಸುತ್ತಾರೆ ಎಂದು ಹೇಳುತ್ತಾರೆ. ಇದರಿಂದ ಕೋಪಗೊಂಡ ರಾಜ ಹಿಂದು ಮುಂದು ನೋಡದೆ ಕೇಶಿರಾಜ ಬಂದೊಡನೆ ಮಾತು ಮಾತಿನಲ್ಲಿ ಉಂಗುರವನ್ನು ತೆಗೆದುಕೊಂಡು, ಈಗ ನಮಿಸದಿದ್ದರೆ ದಂಡಿಸುವ ನಿರ್ಧಾರಕ್ಕೆ ಬರುತ್ತಾನೆ. ಅದಕ್ಕೆ ಕೇಶಿರಾಜ ನಮಸ್ಕರಿಸದೇ ಹಿಂತಿರುಗಿ ಹೋಗುತ್ತಿರುವಾಗ ರಾಜನು–

**“ಕಂಡಿರೇ ಎನ್ನಿಂದವೀ ಸಂಪದಂಬಡೆದು**
**ಅಂಡಲೆವ ದಾರಿದ್ರ್ಯವೆಲ್ಲವಂ ನೆರೆ ತೊಡೆದು**
**ಎನಗೆ ಪೊಡವಡದುದಾಸೀನವಂ ಮಾಳ್ಪರೇ**
**ಮನವಾರೆ ಎಮ್ಮುವಂ ಲಘುಮಾಡಿ ನೋಳ್ಪರೇ**
**ಸಿರಿ ಹಾರುಗೆಂದೆಂಬ ಬೇಸರೇನಿಂತಿಲ್ಲಿ**
**ಸಿರಿ ನಿಮಗೆ ಹೊರೆಯಾದಡೆಮಗಿರ್ಕೆ ತಾನಿಲ್ಲಿ”**

(ಹರಿಹರನ ರಗಳೆಗಳು, ಪುಟ:241)

ಎಂದು ತನ್ನ ಸಂಪತ್ತಿನಿಂದಲೇ ಬೆಳೆದು ನನಗೆ ನಮಸ್ಕರಿಸುವುದಿಲ್ಲವೆಂದು ಹೇಳುತ್ತಾರೆ. ಆಗ ಕೇಶಿರಾಜನಿಗೆ ಸಿಟ್ಟು ಬಂದು ರಾಜನೆದುರಿಗೆ ತನ್ನಲ್ಲಿರುವ ಸಂಪತ್ತು ಮತ್ತು ಮಂತ್ರಿ ಸ್ಥಾನವನ್ನು ತ್ಯಜಿಸಿ ಹೋಗುತ್ತಾನೆ. ಹೋಗುವ ಸಂದರ್ಭದಲ್ಲಿ ಕೇಶಿರಾಜ ಹೇಳುವ ಮಾತು–

**“ಕೇಳರಸ ನಿನ್ನ ಸಿರಿ ನಿನಗಿರ್ಕೆ ನಿನಗಿರ್ಕೆ**
**ಶೂಲಿಯಣುಗರ ಸಂಗಸಂಪವದೆನಗಿರ್ಕೆ**
**ಒಲ್ಲೆನೊಲ್ಲೆಂ ತೆಗೆಯಿದಕೆ ಬೇಡೆಂದೆನುತೆ**
**ಒಲ್ಲೆನೊಲ್ಲೆಂ ಭಕುತಿ ಸಿರಿಗೆ ಸರಿಯಿಲ್ಲೆನುತೆ**
**ಕಂಕಣಂ ಮುದ್ರಿಕೆಯನುಚ್ಚಿ ಬೀಸಾಡುತ್ತೆ**
**ಶಂಕಿಸದೆ ಕೇಯೂರಮಂ ತೆಗೆದು ನೀಡುತ್ತೆ**

...

**ಹೊನ್ನ ಕರಡಿಗೆ ಸೆಜ್ಜೆ ನಿನ್ನವೆಂದವನಿತ್ತು**
**ಚೆನ್ನ ವಸ್ತ್ರಂಗಳಂ ನಿನ್ನ ಸೊಮ್ಮೆಂದಿತ್ತು**
**ಅಂಗೈಯ ಸೆಜ್ಜೆಯೊಳು ಸೋಮನಾಥನನಿರಿಸಿ**
**ಮುಂಗಯ್ಯ ನಾಗವೇದಿಕೆಗೆ ಬಿಜಯಂಗೈಸಿ**
**ಆಸೆಗೇಡೆಗುಡದೆ ತನ್ನಯ ವಸ್ತ್ರಮಂ ಬಿಟ್ಟು**
**ಆಶಾಂಬರನ ಸುತಂ ಕೇಶಾಂಬರವನುಟ್ಟು**
**ಸೇವಕಾವೃತ್ತಿಯಂ ಮನದ ಕಾಲಿಂದೊದೆದು**
**ದೇವ ಸೋಮಯ್ಯನಂ ಚಿತ್ತಹಸ್ತದಿ ಪಿಡಿದು...''**

**(ಹರಿಹರನ ರಗಳೆಗಳು, ಪುಟ:241)**

ಎಂದು ರಾಜನನ್ನೇ ದಿಕ್ಕರಿಸಿ ಆಸ್ಥಾನದಿಂದ ನಿರ್ಗಮಿಸುತ್ತಾನೆ. ಅಂದರೆ ಅಂದಿನ ಸಮಾಜದಲ್ಲಿ ರಾಜವರ್ಗ–ಪುರೋಹಿತ ವರ್ಗಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುವವರನ್ನು ನಿಯಂತ್ರಣದಲ್ಲಿಡುವ ಪರಿಪಾಠವಿತ್ತು ಅಲ್ಲದೇ ಇದು ಸಂಪ್ರದಾಯವೂ ಆಗಿತ್ತು. ಆದ್ದರಿಂದ ರಾಜನನ್ನು–ಪುರೋಹಿತರನ್ನು ಎದುರು ಹಾಕಿಕೊಳ್ಳುವ ಧೈರ್ಯ ಯಾರು ಮಾಡುತ್ತಿರಲಿಲ್ಲ. ಆದರೆ ಹರಿಹರ ಕೇಶಿರಾಜನ ಮೂಲಕ ರಾಜತ್ವ ಮತ್ತು ಪುರೋಹಿತಶಾಹಿಗೆ ಉತ್ತರವನ್ನು ಕೊಡುತ್ತಾನೆ. ಸಮಾಜದಲ್ಲಿ ಮೇಲು–ಕೀಳು ಎಂಬ ಭೇದವಿಲ್ಲದೆ ಎಲ್ಲರೂ ಒಂದೇ ಎನ್ನುವ ಸಮಾನತೆಯ ಬೀಜವನ್ನು ಬಿತ್ತುವ ಕೆಲಸ ಕೇಶಿರಾಜ ರಾಜತ್ವ ಮತ್ತು ರಾಜಾಸ್ಥಾನವನ್ನು ದಿಕ್ಕರಿಸುವ ಮೂಲಕ ಮಾಡುತ್ತಾನೆ. ಕವಿರಾಜಮಾರ್ಗದ ಹೊತ್ತಿಗಾಗಲೇ ಸಾಹಿತ್ಯ ಸಂಸ್ಕೃತಿ ಎನ್ನುವುದು ಪ್ರಭುತ್ವ ವಿಶಾಲ ವಲಯದ ಒಂದು ಭಾಗವಾಗಿತ್ತು. ಅರಸುತನದ ಜೊತೆಗಿನ ಅನುಸಂಧಾನ ಸಾಹಿತ್ಯ ಸಂಸ್ಕೃತಿಯ ಅನಿವಾರ್ಯ ಗುಣವಾಗಿ ಬಿಟ್ಟಿತ್ತು. ಎಲ್ಲಾ ಸನ್ನಿವೇಶಗಳಲ್ಲೂ ಅರಸೊತ್ತಿಗೆಯ ಜೊತೆಗೆ ಅದು ಪ್ರಜ್ಞಾಪೂರ್ವಕವಾಗಿ ಸೌಹಾರ್ದಯುತ ಸಂಬಂಧವನ್ನೇ ಇಟ್ಟುಕೊಂಡಿತ್ತು ಎಂದಲ್ಲ. ಸೌಹಾರ್ದ, ಸೆಣಸಾಟಗಳ ಹೋರಾಟ ಮುಂದುವರಿದೇ ಇತ್ತು ಎನ್ನುವುದು ಪರಿಸ್ಥಿತಿಯ ಸಂಕೀರ್ಣತೆಯನ್ನು ಇದ್ದುದರಲ್ಲಿ ಸುಮಾರಾಗಿ ಚಿತ್ರಿಸುತ್ತದೆ. ಆದರೆ ಮುಂದೆ ಹನ್ನೆರಡನೆಯ ಶತಮಾನದ ವಚನಕಾರರಿಂದ ಪ್ರಭುತ್ವ ವಿರೋಧಿ ನೆಲೆಗಳು ಕಾಣಿಸತೊಡಗಿದವು. ಆದುದರಿಂದ ರಾಜ ಪ್ರಜೆಗಳು ಒಂದು ರೀತಿಯಿಂದ ಬೇರೆಯಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು.

**''ಒಡೆಯರಾಡುವ ಮಾತ ಕಡೆಪರಿಯಂತರ ಕೇಳಿ**
**ಇದರುವೋಗಿ ಕಿಂಕರನಾಗಿ ನಡುಗುತ್ತ ಬಿನ್ನಹಮಾಡುವ**
**ಸದ್ಭಕ್ತನ ತೋರಯ್ಯಾ**
**ಒಡೆಯರಾಡುವ ಮಾತ ಕಂಡು, ಕರೆದಲ್ಲಿ ಕೆಡೆಮೆಟ್ಟಿ**
**ಬಾಯಿ ಘನವೆಂದು ಆಡುವನ ತೋರದಿರಯ್ಯಾ**
**ಅವನ ಸಂಗದಲ್ಲಿರಿಸಯ್ಯಾ,**
**ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ**

**ಕೂಡಲಸಂಗಮದೇವಯ್ಯಾ ನಿಮ್ಮ ಬೇಡುವುದೊಂದೆ ವರವು''**

**(ಬಸವಣ್ಣನವರ ವಚನ ಸಂಪುಟ, ಪುಟ: 109)**

ಎಂದು ಬಸವಣ್ಣನವರು ಹೇಳಿದ ವಚನ ಕೇಶಿರಾಜನನ್ನು ಮತ್ತು ಆರನೇ ವಿಕ್ರಮಾದಿತ್ಯನನ್ನು ಮುಖಾಮುಖಿಯಾಗಿಸಿ ನೋಡಿದಾಗ ಮೇಲಿನ ವಚನ ಮತ್ತಷ್ಟು ಸ್ಪಷ್ಟವಾಗುತ್ತದೆ. ಅಂದರೆ ರಾಜನ ಅಧೀನನಾಗಿ ಬಾಳಬೇಕಿತ್ತು. ರಾಜನನ್ನು ಎದುರು ಹಾಕಿಕೊಂಡರೆ ಈ ಭೇದಭಾವವೇ ಕಾಣುತ್ತದೆ. ಆದರೂ ಕೂಡ ಸಮಾನತೆಯ ದೃಷ್ಟಿಯಿಂದ ನೋಡಿದರೆ ರಾಜ ಮತ್ತು ಪ್ರಜೆ ಭೇದಭಾವವನ್ನು ತಡೆಯಲು ಕೊಂಡಗುಳಿ ಕೇಶಿರಾಜ ವರ್ಗ ಹೋರಾಟವನ್ನು ಮಾಡಿದನು. ಪುರೋಹಿತಶಾಹಿಗಳು ಇದರಿಂದ ನೊಂದು ಕೇಶಿರಾಜನ ಪ್ರಭುತ್ವದ ವಿರುದ್ಧ ತಿರುಗಿ ಬೀಳುತ್ತಾರೆ. ಅದಕ್ಕಾಗಿ ಕೇಶಿರಾಜ ಆಡುವ ಮಾತು–

**''ಸಿರಿಯ ಸಂಗಂ ಶರಣಸಂಗಕ್ಕೆ ಪಗೆಯಾಯ್ತು**
**ನರನೋಲಗದ ಪರಾಧೀನವಿರಿದಂತಾಯ್ತು**
**...**
**ಸಿರಿ ಹಾರಿಹೋಗೆ ನಿಮಗರ್ಚನೆಯಮಾಡುವೆಂ**
**ಶರಣತತಿ ಪುರಜನರು ಮೆಚ್ಚೆ ಕೊಂಡಾಡುವೆಂ''**
**(ಹರಿಹರನ ರಗಳೆಗಳು, ಪುಟ:240)**

ಎಂದು ನುಡಿಯುವಲ್ಲಿ ರಾಜನಿಗಿಂತ ಪುರಜನರು ಮುಖ್ಯವೆಂದು ಸಾರುತ್ತಾನೆ. ಆ ಸಮಯದಲ್ಲಿ ಕೇಶಿರಾಜನನ್ನು ಕಂಡು ನಮ್ಮ ತಪ್ಪನ್ನು ಮನ್ನಿಸಬೇಕೆಂದು ಕಾಲಿಗೆ ಬಿದ್ದು ಹಾಗೂ ಭಯ ಭಕ್ತಿಯಿಂದ ರಾಜನು ''ದೇವಾ, ದೇವಾ ನಿಮ್ಮಡಿಗಳ ಸಾಮರ್ಥ್ಯನರಿಯದೆ ಇನಿತುಂ ದಿನ ವೋಲೈಸಿಕೊಂಡುದಲ್ಲದೆಯುಂ ಪಟ್ಟಣದಿಂ ಬಿಜಯಂಗೆಯ್ಯಲ್ವೇಳ್ದ ಕೋಪಾಂಧಂಗೆ ಕಾಮಾನಳದಗ್ಧಂಗೆ ಲೋಭಚಿತ್ತಂಗೆ ದುರ್ಮೋಹಿಗೆ ದುರ್ಗುಣಿಗೆ ದುರಾಚಾರಿಗೆಶ್ವರ್ಯತಮಃಪಟಲಂ ಕವಿದ ದರ್ದುರದುಶ್ಶೀಲಂಗೆ ದೋಷಿಗೆ ಪಿರಿಯರನರಿಯದ ನರಕಜೀವಿಗೆ ಪೂಜ್ಯರನರಿಯದ ಪುಣ್ಯಹೀನಂಗೆ ಕರುಣಿಸಿ ನಿಮ್ಮಡಿಗಳರಮನೆಯೆ ಮಹಾಮನೆಯಾಗಿ ಎನ್ನ ಭಂಡಾರವೆ ನಿಮ್ಮದಾಗಿ'' (ಹರಿಹರನ ರಗಳೆಗಳು, ಪುಟ:243) ಎಂದು ಹೇಳುವುದನ್ನು ನೋಡಿದರೆ, ಕೇಶಿರಾಜ ಈ ರಾಜ ಮತ್ತು ಪ್ರಜೆಗಳು ಎಲ್ಲರೂ ಒಂದೇ ಎನ್ನುವ ಹೋರಾಟವನ್ನು ವ್ಯಕ್ತಪಡಿಸಿದ್ದನ್ನು ಗಮನಿಸಬಹುದು.

ಪ್ರಾಚೀನ ಕಾಲದಿಂದಲೂ ನಡೆದು ಬಂದಿದ್ದ ಸಾಮಾಜಿಕ ದೌರ್ಜನ್ಯಗಳನ್ನು ಹತ್ತಿಕ್ಕಲು ವಚನಕಾರರೇ ಬರಬೇಕಾಯಿತು. ಆ ಪ್ರೇರಣೆಯಿಂದಲೇ ರಾಜಾಶ್ರಯದ ವಿರುದ್ಧ ತಮ್ಮ ವಿದ್ವತ್ತಿನಿಂದ, ಸೃಜನಶೀಲ ಬರವಣಿಗೆಯ ಮೂಲಕ ಹೋರಾಟ ಮಾಡಿದವನು ಹರಿಹರ. ಪ್ರಭು ಪ್ರತಿಭಟನೆಯ ಕಣವನ್ನು ನಿರ್ಮಿಸಿದವನು ಕೇಶಿರಾಜ. ಅದರಲ್ಲಿ ಹೋರಾಡಿ ಯಶಸ್ವಿಯಾದವನು ಬಸವಣ್ಣ. ಆ ಹೋರಾಟಗಳನ್ನು ಇತಿಹಾಸದಲ್ಲಿ ದಾಖಲಿಸಿದವನು ಹರಿಹರ. ಹರಿಹರ ಸಾಮಾನ್ಯ ಜನತೆಗೆ

ದಾರಿದೀಪವಾಗಬೇಕೆಂದು ಮಹಾಮನೆ, ಗಣಪರ್ವ, ಪ್ರಸಾದ ವಿತರಣೆಯಂತಹ ಹಲವಾರು ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತಾನೆ. ರಾಜ ಗಳಿಸಿದ ಸಂಪತ್ತು ರಾಜನದಾಗಿರದೇ ಅದು ಸಾಮಾನ್ಯ ಜನತೆಯ ಸಂಪತ್ತು ಎಂದು ಬಸವಣ್ಣನ ಮೂಲಕ ಹೇಳುವ ರೀತಿಯು ಹರಿಹರನ ವರ್ಗ ಹೋರಾಟವನ್ನು ಸೂಚಿಸುತ್ತದೆ. ಪ್ರಾಚೀನ ಕಾಲದಿಂದಲೂ ಋಣಕ್ಕಾಗಿ ರಾಜನ ಆಸ್ಥಾನದಲ್ಲಿಯೇ ಇದ್ದು ಅವನೊಡನೆ ಬಾಳಿ ಸಾಯಬೇಕಾಗಿತ್ತು. ಆದರೆ ಹರಿಹರ ಈ ಪದ್ಧತಿಯಿಂದ ಋಣ ಮುಕ್ತರಾಗಿ, ರಾಜನನ್ನೇ ತೆಗಳುವ ಮಟ್ಟಕ್ಕೆ ಬೆಳೆದು, ಅವರು ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಟ ಮಾಡಿದರು. ಆದುದರಿಂದಲೇ ಜನ ಸಾಮಾನ್ಯರನ್ನು, ಶಿವಶರಣರನ್ನು ತೆಗೆದುಕೊಂಡು ತನ್ನಂತೆಯೇ ರಾಜಾಶ್ರಯ ಬಿಟ್ಟು ಬಂದಿದ್ದರಿಂದ, ತನ್ನ ರಗಳೆಯ ಉದ್ದಕ್ಕೂ ಅರಸನ ಅನ್ಯಾಯಕ್ಕೆ ಪ್ರತಿಯಾಗಿ ನಿಲ್ಲುವರು ಶಿವಭಕ್ತರಾಗಿದ್ದರಿಂದ ವರ್ಗ ಹೋರಾಟದ ವಿರುದ್ಧ ಆ ಪಾತ್ರಗಳ ಮೂಲಕ ಹರಿಹರ ತಿರುಗಿ ಬಿದ್ದಿದ್ದಾನೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ. ಎಂ. (ಸಂ), (2013), ಹರಿಹರನ ರಗಳೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ಕಲಬುರ್ಗಿ ಎಂ. ಎಂ. (ಸಂ), (1999), ಹರಿಹರನ ರಗಳೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಕಲಬುರ್ಗಿ ಎಂ. ಎಂ. (ಸಂ), (2011), ಬಸವಣ್ಣನವರ ವಚನ ಸಂಪುಟ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ವಿದ್ಯಾಶಂಕರ ಎಸ್. (ಸಂ), (2001), ಸಂಕೀರ್ಣ ವಚನಸಂಪುಟ–2, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
5. ಸುಂಕಾಪುರ ಎಂ. ಎಸ್. (ಸಂ), (1976), ಮಹಾಕವಿ ಹಂಪೆಯ ಹರಿಹರದೇವಕೃತ ನೂತನ ಪುರಾತನರ ರಗಳೆಗಳು, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.